# ಕೊನೆಯುಸಿರೆಳೆದ ಶಾಲ್ಮಲಿ

15

ನರಹರಿ ತಾನು ಆನೆಮಹಲಿಗೆ ಬಂದಿರುವೆನೆಂದು ಶಾಲ್ಮಲಿಯ ತಾಯಿ ತಂದೆಗೆ ತಿಳಿಸಿದ ಕೂಡಲೇ ಜಯವಂತ ಮತ್ತು ಗೌರಿ ಶಾಲ್ಮಲಿಯನ್ನು ಕರೆದುಕೊಂಡು ಆನೆಮಹಲಿಗೆ ಬಂದರು. ಶಾಲ್ಮಲಿ ಆರೋಗ್ಯವಂತಳಾಗಿರುವುದನ್ನು ಕಂಡು ನರಹರಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೆ ಶಾಲ್ಮಲಿ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವಷ್ಟು ಶಕ್ತಳಾಗಿದ್ದಳೇ ವಿನಾ ಮನೆಯ ಎಲ್ಲಾ ಕೆಲಸಗಳನ್ನು ಮಾಡುವಷ್ಟು ತ್ರಾಣ ಅವಳಲ್ಲಿ ಇರಲಿಲ್ಲ.

